ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
Hubli-Dharwad Municipal Corporation

NO. HDMC/KUWSMP/Hbl-Dwd/2020-21/106 Date: 21.01.21

ಇವರಿಗೆ
ಉಪ ಸಂರಕ್ಷಣಾ ಅಧಿಕಾರಿ
ಪ್ರಾದೇಶಿಕ ಅರಣ್ಯ ವಿಭಾಗ,
ಧಾರವಾಡ.

ಮಾನ್ಯರೇ

**ವಿಷಯ:** ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಅನುಷ್ಠಾನವಾಗುತ್ತಿರುವಂತಹ 24X7 ನಿರಂತರ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ತಮ್ಮ ವ್ಯಾಪ್ತಿಯಲ್ಲಿ ಬರುವ ರಾಯಾಪುರ ಸಾಮಾಜಿಕ ಅರಣ್ಯದಲ್ಲಿ ಪೈಪಲೈನ್ ಅಳವಡಿಸಲು ಅನುಮತಿ ನೀಡಬೇಕಾಗಿ ಕೋರುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರಕಾರದ ವತಿಯಿಂದ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ವಿಶ್ವ ಬ್ಯಾಂಕ ನೆರವಿನ 24X7 ನಿರಂತರ ನೀರು ಸರಬರಾಜು ಯೋಜನೆಯನ್ನು ಎಲ್ಲಾ 67 ವಾರ್ಡುಗಳಲ್ಲೂ ಅನುಷ್ಠಾನಗೋಳ್ಳಿಸಲಾಗುತ್ತಿದ್ದು ಸರಿಯಷ್ಟೇ, ಈ ಕಾರ್ಯಕ್ಕಾಗಿ ಅಮ್ಮಿನಭಾವಿ ನೀರು ಶುದ್ಧೀಕರಣ ಘಟಕದಿಂದ ತಮ್ಮ ವ್ಯಾಪ್ತಿಯಲ್ಲಿ ಬರುವಂತಹ ರಾಯಾಪುರ ಪ್ರಾದೇಶಿಕ ಅರಣ್ಯದ ಆವರಣದಲ್ಲಿ ಇರುವ ನೆಲ ಮಟ್ಟದ ಜಲ ಸಂಗ್ರಹಾಗಾರಕ್ಕೆ (GLSR) ಹೊಸದಾಗಿ 1219ಮಿಮಿ ವ್ಯಾಸದ ಹಾಗೂ 500ಮಿಮಿ ವ್ಯಾಸದ ಪೈಪಲೈನ್‌ಗಳನ್ನು ಅಳವಡಿಸಬೇಕಾಗಿದ್ದು, ಈ ಕಾಮಗಾರಿಗಳು ತಮ್ಮ ಇಲಾಖೆಗೆ ಸಂಬಂಧಿಸಿದ (ರಾಯಾಪುರ) ಜಾಗದಲ್ಲಿ ಬರುವದರಿಂದ ಈ ಕಾಮಗಾರಿಗಾಗಿ 19 ಗಿಡಗಳು ಬುಡಮೇಲು ಅಥವಾ ತೆರವುಗೊಳ್ಳಿಸಬೇಕಾಗಿರುವದರಿಂದ ಪರವಾನಗಿ ನೀಡಲು ನಾವು ಕೋರುತ್ತಿದ್ದೇವೆ. ಹಾಗೂ ಇದಕ್ಕೆ ಸಂಬಂಧಿಸಿದ ಶುಲ್ಕದ ಮೊತ್ತವನ್ನು ತಾವು ಸೂಚಿಸಿದ ಮೇರೆಗೆ ಪಾವತಿಸಲಾಗುವುದು. ಕಾಮಗಾರಿಯ ಶೀಘ್ರ ಅನುಷ್ಠಾನಕ್ಕಾಗಿ ಸೂಕ್ತ ಪರವಾನಿಗೆಯನ್ನು ನೀಡಲು ಈ ಮೂಲಕ ಕೋರಲಾಗಿದೆ.

"ವಂದನೆಗಳೊಂದಿಗೆ"

21/1/2021

ಆಯುಕ್ತರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಹುಬ್ಬಳ್ಳಿ

ಅಡಕ:
ಪ್ರಸ್ತಾವಿತ ಪೈಪಲೈನ್ ಅಳವಡಿಸುವ ನಕ್ಷೆ

Dispatch Clerk,
Deputy Conservator of Forests
Dharwad Division, Dharwad